ನೋಡಿದರೆ ಆತ್ಮಹತ್ಯೆಗಿಂತ ಅತ್ಯುತ್ತಮ ಮಾರ್ಗ ನನಗೆ ಯಾವುದೂ ತೋಚಲಿಲ್ಲ ಎಂದು ಬರೆದಿದ್ದರು.

ರಮಾನಾಥರು ಬಿಟ್ಟು ಹೋಗಿದ್ದ ಆಸ್ತಿ, ನಗದು ಅವರು ನನಗೆ ನೀಡಿದ್ದ ಪ್ರೀತಿ ಎಲ್ಲವೂ ಅವರ ದಾರಿಗೆ ನನ್ನನ್ನು ಕರೆಯುತ್ತಿರುವ ಸಂಜ್ಞೆಗಳು ಎನ್ನಿಸಲು ಶುರುವಾಯಿತು. ಸಾವು ಎನ್ನುವುದು ಈ ಎಲ್ಲ ರಗಳೆಗಳಿಗೆ ಒಂದೇ ಕ್ಷಣದ ಫುಲ್ ಸ್ಟಾಪ್ ಅಲ್ಲವೇ ಎಂಬ ಆಲೋಚನೆ ನನ್ನಲ್ಲಿ ತೀವ್ರಗೊಳ್ಳುತ್ತಿತ್ತು. ಸಾವು ಎಂಥ ಬಿಡುಗಡೆ!

ಅದರತ್ತ ಎದ್ದು ಹೊರಟೇಬಿಡಲೇ ಎನ್ನಿಸುತ್ತಿತ್ತು. ಬದುಕೇ ಕಷ್ಟ. ಸಾವೇ ಸುಖ ಎಂಬ ಭಾವ ಮೂಡಿತು. ರಮಾನಾಥರು ಎಷ್ಟು ಸುಲಭವಾಗಿ ಸಾವಿನ ಸುಖವನ್ನು ಅಪ್ಪಿಕೊಂಡರು! ರಮಾನಾಥರಿಗೆ ಕೊನೆಯ ಕ್ಷಣಗಳಲ್ಲಿ ಜೊತೆಯಲ್ಲಿ ಇಲ್ಲದೆ ಮಾಡಿದ ತಪ್ಪನ್ನು ಅವರ ಸಾವಿನ ದಾರಿಯಲ್ಲೂ ಮಾಡಬಾರದು. ಅವರು ನಾಲ್ಕು ವರ್ಷಗಳಿಂದ ತೋರಿದ ಪ್ರೀತಿಗೆ ಕನಿಷ್ಠ ಅವರ ಅಂತಿಮ ಪ್ರಯಾಣದಲ್ಲಿ ಜೊತೆಯಾಗುವ ಮೂಲಕ ಅವರಲ್ಲಿ ನನಗಿದ್ದ ಕ್ಲೇಷ ಭಾವನೆ ದೂರ ಮಾಡಿಕೊಳ್ಳಬೇಕು. ಪರಲೋಕದಲ್ಲಿ ರಮಾನಾಥರ ಸಂಸಾರಸುಖಕ್ಕೆ ಸಾಕ್ಷಿಯಾಗಬೇಕು... ಹೀಗೆ ಎಂತೆಂತಹುದೋ ಆಲೋಚನೆಗಳು ನನ್ನನ್ನು ಮುತ್ತಿದವು. ರಮಾನಾಥರು ತಮ್ಮ ನಡವಳಿಕೆಯಿಂದ ತುಂಬಿದ್ದ ಜೀವನಪ್ರೀತಿ ಅವರ ಸಾವಿನಲ್ಲಿ ಅಂತ್ಯ ಕಂಡಿತ್ತು. ಇನ್ನು ಗುರಿ, ದಾರಿ ಎರಡೂ ರಮಾನಾಥರು ತೋರಿದ್ದೇ ಎನ್ನಿಸಲು ಪ್ರಾರಂಭವಾಯಿತು. ತಂದೆಯಂಥ ರಮಾನಾಥರು ಅವರ ಆಜಾನುಬಾಹು ದೇಹ ಹೊತ್ತು ನಿಂತಿದ್ದರು. ಅವರ ಕಂಗಳಲ್ಲಿ ತಾಯಿಯ ವಾತ್ಸಲ್ಯ!

ಕೆಲವೊಮ್ಮೆ ನಾನು ಕೆಲಸ ಬಿಟ್ಟು ಹೋಗುತ್ತೇನೆ ಎಂದರೆ ರಮಾನಾಥರು ಕೋಪ ಬೇಡ, ನಾನು ಹೇಳುವುದನ್ನು ಕೇಳು ಎಂದು ಅನುನಯಿಸಿ ಹೇಳುತ್ತಿದ್ದರು. ಚಿತ್ರರಂಗ ನೀನು ಅಂದುಕೊಂಡಷ್ಟು ಸುಲಭವಲ್ಲ. ನಾನು ಸೂಪರ್‌ಸ್ಟಾರ್ ಆಗುವ ಮುನ್ನ ಎಷ್ಟೋ ವರ್ಷ ಊಟಕ್ಕಿಲ್ಲದೆ ಶ್ರಮಪಟ್ಟಿದ್ದೇನೆ. ಅಂತಹ ಕ್ಷಣಗಳಲ್ಲಿ ಯಾರೋ ಕೈ ಹಿಡಿದು ನನ್ನನ್ನು ಇಲ್ಲಿಯವರೆಗೆ ಕರೆ ತಂದಿದ್ದಾರೆ ಎಂದೆಲ್ಲ ಹೇಳುತ್ತಿದ್ದ ರಮಾನಾಥರು ಇಲ್ಲಿಯವರೆಗೆ ನನ್ನ ಕೈ ಹಿಡಿದು ನಡೆಸಿದವರೇ ಅಲ್ಲವೇ ಎನಿಸಿತು. ಈ ನೆನಪುಗಳಿಂದ ಮೈಯೆಲ್ಲ ಬೆವರುತ್ತಿತ್ತು. ಇಡೀ ದೇಹ ಹಗುರವಾದಂತೆ ಎಲ್ಲೋ ಹಾರಾಟ ನಡೆಸುತ್ತಿತ್ತು. ಸುತ್ತಲೂ ಏನೋ ಶಬ್ದಗಳು ಕ್ರಮೇಣ ದೂರವಾದಂತೆ ಭಾವ. ಹೀಗೆ ಹಗುರವಾಗಿರುವುದೇ ಸುಖ ಎನ್ನಿಸುತ್ತಿತ್ತು. ಸ್ವಲ್ಪ ಹೊತ್ತು ಅಷ್ಟೇ, ನಾನು ನಾನಾಗಿಯೇ ಇರಲಿಲ್ಲ!


## ವಿ.ಎಲ್. ಪ್ರಕಾಶ್

ಹುಟ್ಟಿದ್ದು ಗೌರಿಬಿದನೂರು ತಾಲೂಕಿನ ವೇದಲವೇಣಿ. ಬೆಳೆದದ್ದು ಮಗ್ಗಗಳ ನಗರಿ ದೊಡ್ಡಬಳ್ಳಾಪುರದಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವೀಧರ. ಸಿನಿಮಾ, ವಾಣಿಜ್ಯ ಪತ್ರಕರ್ತ, ಅಂಕಣಕಾರ. ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲದಿಂದ ತುಮಕೂರಿನ ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರದಲ್ಲಿ ಸಹಾಯಕ ಪ್ರಾಧ್ಯಾಪಕ. 'ಕಥೆಯಲ್ಲದ ಕಥೆ' ಕಥಾಸಂಕಲನ. 'ನವಿಲ ಕಿನ್ನರಿ' ಕನ್ನಡ ಚಲನಚಿತ್ರಕ್ಕೆ ಕಥೆ, ಸಂಭಾಷಣೆ ಬರೆದಿದ್ದಾರೆ.